ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಮಿ|| ಅರ್ಜೀ ನಂಬರ್ 245.

ಮೃತಪಟ್ಟ ಕ್ಲೋಸ್‌ಪೇಟೆಲಿದ್ದ ಪೆರಮಾಳ್‌ವೊದಲಿಯಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಾಮಸಾಮಿವೊದಲಿಯಾರ್ರು ಚಿನ್ನಸಾಮಿವೊದಲಿಯಾರ್ರು ಶ್ರೀನಿವಾಸವೊದಲಿಯಾರ್ರು ಮೈನರ್ ಗಾರ್ಡಿಯರ್ ಮತ್ತು ತಾಯಿ ಭಾಗ್ಯಮ್ಮಾಳ್ ಮೃತಪಟ್ಟ ಸದರೀ ಪೆರಮಾಳ್‌ವೊದಲಿಯಾರ್ರಿಗೆ ಮೈನರ್ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕ್ಲೋಸ್‌ಪೇಟೆ ಸ್ಥಳದ ಭಾಗ್ಯಮ್ಮಾಳ್ ಕ್ಲೋಸ್‌ಪೇಟೆ ವಾಸಸ್ಥರಾಗಿ ಮೃತಪಟ್ಟ ಪೆರಮಾಳ್‌ವೊದಲಿಯಾರ್ರ ಜಿಂದಗಿಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮೈನರ್‌ಗಾರ್ಡಿಯರ್ ಭಾಗ್ಯಮ್ಮಾಳ್ ಅರ್ಜಿಯನ್ನು 1887ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೆರಮಾಳ್‌ವೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1887ನೇ ಇಸವಿ ಮಾರ್ಚೀ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ಯೆಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 14ನೇ ಮಾರ್ಚೀ 1887.

ಇದರಿಂದ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕಿಗೆ ಶೇರಿದ ಕಾವಸಂದ್ರದ ಜಂಗಲ್‌ನಲ್ಲಿ ಬಂದು ಅಥವಾ ಎರಡು ವರುಷಗಳ ವರಿಗೆ ಸಾದೆ ಕಡದುಕೊಳ್ಳುವ ಹಕ್ಕನ್ನು ಅಪೇಕ್ಷಿಸತಕ್ಕವರಿಂದ ಬರುವ ವೊಹರ್ಮಾಡಿದ ದರಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು 1887ನೇ ಇಸವಿ ಏಪ್ರಿಲ್ 20ನೇ ತಾರೀಖಿನವರಿಗೆ ತೆಗದುಕ್ಕೊಳ್ಳುವರು:—

2. ಈ ಜಂಗಲ್‌ನಿಂದ ಸಾಗಿಸಲ್ಪಡುವ ಕತ್ತರಿಸದೇ ಇರುವ ಸಾದೆಯ ಅಥವಾ ಸಣ್ಣ ಸಣ್ಣ ತುಂಡುಗಳಾಗಿ ಕೊಯಿದು, ಯಾ ಕತ್ತರಿಸಿ ಇರುವ ಸಾದೆಯ ಭಂಡಿ ಬೋಜಾ ವೊಂದಕ್ಕಾಗಲಿ ಅಥವಾ 68 ಘನ ಅಡಿಗಳುಳ್ಳ ಟನ್ ಬಂದಕ್ಕಾಗಲಿ ಆಯಾ ದರಖಾಸ್ತುದಾರರು ಕೊಡಲು ವೊಪ್ಪುವ ಶೀನಿಯರೇಜ್ ತೀರ್ವೆಯ ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇರಬೇಕು. ನಗದು ಅಥವಾ ನೋಟು ಮೂಲಕ (100) ರೂಪಾಯಿಗಳ ಡಿಪಾಜಿಟ್ ವೊಬಲಗಿನ ಸಮೇತ ಬಾರದೆ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ. ಈ ಕಂಟ್ರಾಕ್ಟಿನಲ್ಲಿ ಸಾಧಾರಣವಾಗಿರುವ ಎರಡು ಭಂಡಿ ಬೋಜಾಗಳು ವೊಂದು ಟನ್ ವುಂದು ಎಣಿಸಲ್ಪಡುವದು.

3. ಜಂಗಲ್‌ನಲ್ಲಿ ಯಾವ ಪ್ರದೇಶದಲ್ಲಿ ಮರಕಡಿಯತಕ್ಕದ್ದೋ ಅದನ್ನು ಕಡಿಯತಕ್ಕ ಮರಗಳನ್ನು ಸಹ ಫಾರೆಸ್ಟ್ ಇಲಾಖೆಯವರು ಗುರ್ತು ಮಾಡುತ್ತಾರೆ, ಹಾಗೆ ಗುರ್ತು ಮಾಡಲ್ಪಟ್ಟ ಮರಗಳನ್ನು ಮಾತ್ರ ಕಂಟ್ರಾಕ್ಟುದಾರನು ಫಾರೆಸ್ಟ್ ಇಲಾಖೆಯವರು ನೇಮಿಸುವ ರೀತಿಯಲ್ಲಿ ಕಡದುಕೊಳ್ಳುವದಕ್ಕೂ ಮತ್ತು ತಿಂಗಳು ಬಂದಕ್ಕೆ 400 ಟನ್ ಅಥವಾ ವರುಷ ಬಂದಕ್ಕೆ 4,800 ಟನ್‌ಗಿಂತ ಹೆಚ್ಚಾಗಿ ಸಾದೆಯನ್ನು ಕಡಿದು ಸಾಗಿಸದೆ ಇರುವದಕ್ಕೂ ಬದ್ಧನಾಗಿ ಮುಚ್ಚಲಿಕೆ ಬರದುಕೊಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಸರ್ಕಾರದವರು ಗೊತ್ತು ಮಾಡುವ ಜುರ್ಮಾನೆ ತೆರಲಿಕ್ಕೆ ಗುರಿಯಾಗಿರುವದಾಗಿ ಸದರೀ ಮುಚ್ಚಲಿಕೆಯಲ್ಲಿ ನಮೂದಿಸಬೇಕು. ವುಳಿಸಿಕೊಳ್ಳಲ್ಪಟ್ಟು ಇರುವ ಜಾತಿ ಮರಗಳನ್ನು ಫಲವೃಕ್ಷಗಳನ್ನು ಅಥವಾ ಇತರ ಜಿನಸಿ ಹುಟ್ಟುವಳಿಯಾಗತಕ್ಕ ಮರಗಳನ್ನು ಕಡಿಯಕೂಡದು, ಮತ್ತು ಅವುಗಳ ರೆಂಬೆಗಳನ್ನು ಸವರಲೂ ಕೂಡದು.

4. ಕಂಟ್ರಾಕ್ಟುದಾರನು ಸಾದೆಯನ್ನು ಭಂಡಿಗಳಿಗೆ ಭರ್ತೀಮಾಡಿಕ್ಕೊಂಡು ಹೋಗಿ ಸರ್ಕಾರದ ಗಣಿಯವರಿಗೆ ಟನ್ ವೊಂದಕ್ಕೆ ಏಳು ರೂಪಾಯಿಗಳಿಗೆ ಜಾಸ್ತಿ ಇಲ್ಲದ ದರಪ್ರಕಾರ ಬಿಕರೀ ಮಾಡತಕ್ಕದ್ದು. ಇವನು ತರುವ ಸಾದೆಯು ಯಲ್ಲಾ ಗಣಿಯವರಿಗೂ ಬೇಕಾಗುವದಕ್ಕಿಂತ ಜಾಸ್ತಿಯಾಗಿದ್ದು ಅದು ಅವರಿಗೆ ಅವಶ್ಯಕವಿಲ್ಲದ ಪಕ್ಷದಲ್ಲಿ ಹಾಗೆ ವುಳಿಯುವ ಸಾದೆಯನ್ನು ಅವನು ಮತ್ತೆಲ್ಯಾದರೂ ಯಾವ ದರದ ಪ್ರಕಾರವಾದರೂ ಮಾರಿಕೊಳ್ಳಬಹುದು.

5. ಈ ವಿಷಯದಲ್ಲಿ ಮೇಲೆ ನಮೂದಾಗುವದಕ್ಕಿಂತ ಹೆಚ್ಚು ತಪಸೀಲುಗಳು ತಿಳಿಯಬೇಕಾಗಿ ಇದ್ದಲ್ಲಿ ಅವುಗಳನ್ನು ಕಂಟ್ರಾಕ್ಟಿನ ಷರತ್ತುಗಳನ್ನೂ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

6. ಮೊಹರ್ಮಾಡಿದ ದರಖಾಸ್ತುಗಳನ್ನು ಸ॥ 1887ನೇ ಇಸವಿ ಏಪ್ರೆಲ್ 20ನೇ ತಾರೀಖು ಮಧ್ಯಾನ್ಹ 12 ಘಂಟೆಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ಡೆಪ್ಯೂಟಿ ಕಮ್ಮಿಷನರವರಾಗಲಿ ಅಥವಾ ಅವರು ನೇಮಿಸುವ ಇತರ ಆಫೀಸರರಾಗಲಿ ಆಗ್ಯೆ ಹಾಜರಿರುವ ದರಖಾಸ್ತುದಾರರ ಸಮಕ್ಷವು ಪೊಡೆದು ನೋಡುವರು.

7. ಡೆಪ್ಯೂಟಿ ಕಮ್ಮಿಷನರವರು ಕಾರಣ ನಮೂದಿಸದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ತಮ್ಮಲ್ಲಿ ಪುಳಿಸಿಕೊಂಡು ಇದ್ದಾರೆ.

8. ಯಾವ ಮನುಷ್ಯನ ದರಖಾಸ್ತು ಅಂಗೀಕರಿಸಲ್ಪಡುವದೋ ಅವನ ಡಿಪಾಜಿಟ್ ಪೊಬಲಗು ನಿಲ್ಲಿಸಿಕ್ಕೊಳ್ಳಲ್ಪಡುವದು. ಅಂಥಾ ದರಖಾಸ್ತುದಾರನ ದರಖಾಸ್ತು ಮಂಜೂರಾದ ಸಂಗತಿ ಅವನಿಗೆ ತಿಳಿಸಲ್ಪಟ್ಟು (10) ದಿವಸಗಳ ಪೊಳಗಾಗಿ ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಸದರೀಯವನು ಅವಶ್ಯಕವಾದ ಮುಚ್ಚಲಿಕೆ ಬರದು ಕೊಡಬೇಕು ಮತ್ತು ಕಂಟ್ರಾಕ್ಟು ಷರತ್ತುಗಳ ಪ್ರಕಾರ ಕ್ರಮವಾಗಿ ನಡದುಕೊಳ್ಳಲು ಜಾಮೀನು ತರೀಕ್ ನಗದು 500 ರೂಪಾಯಿ ಠೇವಣಿ ಇಡಬೇಕು, ಇದಕ್ಕೆ ತಪ್ಪಿದರೆ ಅವನ ಡಿಪಾಜಿಟ್ ಪೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

9. ದರಖಾಸ್ತುದಾರರು ತಾವು ಕಳುಹಿಸುವ ದರಖಾಸ್ತುಗಳ ಮೇಲೆ "ಕಾವುಸಂದ್ರದ ಜಂಗಲ್‌ನಿಂದ ಸೂದೆ ಕಡದು ತರುವ ಹಕ್ಕಿಗೋಸ್ಕರ ಕಳುಹಿಸಲ್ಪಟ್ಟ ದರಖಾಸ್ತು" ಎಂದು ಬರಿಯಬೇಕು.

ತಾರೀಖು 17ನೇ ಮಾರ್ಚೀ 1887ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ॥ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಸರ್ಕಾರ ಬಂಜರ್ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಕೋಲಾರ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಯಾ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂ 1887ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಈ ಹರಾಜು ಸದರೀ ತಾರೀಖು ದಿವಿ 12 ಘಂಟೆಗೆ ಷುರೂ ಆಗುತ್ತೆ.

2. ಹರಾಜು ಪೂರೈಸಿದ ವಡನೆ ಚಡ ಸವಾಲ್‌ದಾರನು ಹರಾಜು ಪೊಬಲಗಿಗೆ ಕೇಕಡಾ 25 ರೂಪಾಯಿ ಮೇರಿಗೆ ಠೇವಣಿ ಯಿಡಬೇಕು, ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ತಿಳಿಸಲ್ಪಟ್ಟ 7 ದಿವಸಗಳ ವಳಗಾಗಿ ಬಾಕೀ ಪೊಬಲಗು ಮತ್ತು ಪೂರಾ ಪೊಬಲಗ್ಯೆ ರೂಪಾಯಿ 1ಕ್ಕೆ 1 ಆಣೆ ಪ್ರಕಾರ ಲೋಕಲ್‌ಸೆಸ್ ಸಹಾ ಪಾವತೀ ಮಾಡಬೇಕು. ಹಾಗೆ ಪಾವತೀ ಮಾಡದೆ ಯಿದ್ದರೆ ಠೇವಣಿ ಯಿಟ್ಟ ಪೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಮೇಲ್ಕಂಡ ಠೇವಣಿ ಪೊಬಲಗು ಯಿಡುವದಕ್ಕೆ ತಪ್ಪಿದರೂ ಅಥವಾ ಬಾಕೀ ಪೊಬಲಗನ್ನ ಪಾವತೀ ಮಾಡುವದಕ್ಕೆ ತಪ್ಪಿದರೂ ಹಕ್ಕು ಪುನಹ ಹರಾಜುಮಾಡಲ್ಪಡುವದು ಲುಕ್ಸಾನ್ ಪೊಬಲಗು ತಪ್ಪಿದ ಚಡ ಸವಾಲ್‌ದಾರನಿಂದಲೇ ವಸೂಲ್ಮಾಡಲ್ಪಡುವದು.

3. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮಿಗೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೆ ತಿಳಿಸಬೇಕು. ಇತರರ ಯೇಜಂಟುಗಳಾಗಿ ಸವಾಲ್ ಮಾಡುವದಾಗಿ ಯಿದ್ದರೆ ಅವರಿಂದ ರುಜು ಮಾಡಲ್ಪಟ್ಟ ಪೊಖ್ತ್ಯಾರ್‌ನಾಮೆಯನ್ನ ಹಾಜರ್ಮಾಡಬೇಕು, ಹಾಗೆ ಹಾಜರ್ಮಾಡದೆ ಇದ್ದರೆ ಅಂಥಾವರ ಸವಾಲ್‌ಗಳು ತಿರಸ್ಕರಿಸಲ್ಪಡುವದು.

ಈ ಹರಾಜು ದಿವಾನ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ಸಿ. ಸುಬ್ಬರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರ್ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 117.

ಮೃತಪಟ್ಟ ಪುಟ್ಟಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಮಸ್ವಾಮಯ್ಯನವರು, ಮೃತಪಟ್ಟ ಸದರೀ ಪುಟ್ಟಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಸ್ಥಳದ ಸದರೀ ರಾಮಸ್ವಾಮಯ್ಯನವರು ಅರಕಲ್‌ಗೂಡು ತಾಲ್ಲೂಕು ಮಲ್ಲದಾಸಪಾಳ್ಯದಲ್ಲಿ ವಾಸಸ್ಥರಾಗಿದ್ದು ಮೃತಪಟ್ಟ ಪುಟ್ಟಮ್ಮನವರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗ ಖಾಯಿಷ್‌ಮಾಡಿರುತ್ತಾರೆ.